CC No.16/2024
CW-3  PW-2

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು  ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ.  16/2024**

**ಹೆಸರು** :- **ಲಕ್ಷ್ಮೀ ನಾರಾಯಣ**

**ತಂದೆಯ ಹೆಸರು** :- **ರಾಮಚಂದ್ರಪ್ಪ**

**ವಯಸ್ಸು** :- **57 ವರ್ಷ**

**ಉದ್ಯೋಗ** :- **ಸರ್ಕಾರಿ ನೌಕರ**

**ಸ್ಥಳ** :- **ಸಾಗರ**

**ದಿನಾಂಕಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿಃ 30.11.2022 ರಂದು ನಾನು ಸೊರಬ ಮುಖ್ಯ ರಸ್ತೆಯಲ್ಲಿರುವ ಸುರಭಿ ಕಾಂಪ್ಲೆಕ್ಸ್ ಬಳಿ ಗಲಾಟೆಯ ವಿಚಾರವಾಗಿ ಪಂಚನಾಮೆಗೆ ಸಹಿ ಹಾಕಿರುತ್ತೇನೆ. ಸದರಿ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.00 ಗಂಟೆಯವರಗೆ ಜರುಗಿಸಿರುತ್ತಾರೆ. ನನಗೆ ಬೇರೆ ಯಾವುದೇ ವಿಚಾರ ಗೊತ್ತಿರುವುದಿಲ್ಲ. ಸಾಕ್ಷಿಗೆ ಪಂಚನಾಮೆಯನ್ನು ತೋರಿಸಲಾಗಿದ್ದು, ಸಾಕ್ಷಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೆ ನಿಪಿ-2 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿದ್ದು, ಸಾಕ್ಷಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದು ಈಗಾಗಲೆ ನಿಪಿ-4 ಎಂದು

ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-4 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿದ್ದು, ಸಾಕ್ಷಿ ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವು ಈಗಾಗಲೇ ನಿಪಿ-3 ಎಂದು ಗುರುತಿಸಲ್ಪಟ್ಟಿರುತ್ತದೆ.

(**ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು**).

**ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ**

ನಿಪಿ-2 ರ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.00 ಗಂಟೆಯವರಗೆ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ಘಟನಾ ಸ್ಥಳವನ್ನು ಚಾಸಾ-1 ರವರು ತೋರಿಸಿರುತ್ತಾರೆ ಅಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ ವೈ ಜಿ ಪಿ ವಕೀಲರಿಂದಃ**

ನಾನು ಆವಾಗ ಅವಾಗ ಪೋಲಿಸ್ ಠಾಣೆಗೆ ಹೋಗುತ್ತೇನೆ ಅಂದರೆ ಸರಿ. ನಾನು ನಿಪಿ-2 ಮತ್ತು 4 ಕ್ಕೆ ಪೋಲಿಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿ. ನಿಪಿ-3 ರಲ್ಲಿ ಕಾಣುವ ಖಾಸಗಿ ಮಳಿಗೆಗಳು ಖಾಸಗಿ ಬಸ್ ಸ್ಟಾಂಡ್ ನಲ್ಲಿರುವ ಮಳಿಗೆಗಳು ಅಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(**ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು**).

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**